ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-1.
ದೂ. **080-22372738** E-mail: nregs-ka@nic.in

ಗ್ರಾಅಪ 74 ಉಖಾಯೋ 2014 ದಿನಾಂಕ: 07-03-2015 10

## ಸುತ್ತೋಲೆ

ವಿಷಯ: ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಕಾಮಗಾರಿಗಳನ್ನು ಜಂಟಿಯಾಗಿ ಚೆಕ್‌ಮೇಷರ್‌ಮೆಂಟ್ ಮಾಡುವ ಹಾಗೂ ತಾಂತ್ರಿಕ ಅನುಮೋದನೆಯನ್ನು ನೀಡುವ ಕುರಿತು ಪರಿಷ್ಕೃತ ಆದೇಶ.

ಉಲ್ಲೇಖ: 1. ಈ ಆಯುಕ್ತಾಲಯದ ಸುತ್ತೋಲೆಯ ಪತ್ರದ ಸಂಖ್ಯೆ ಗ್ರಾಅಪ 645 ಉಖಾಯೋ 2014 ದಿನಾಂಕ: 08-09-2014

2. ಈ ಆಯುಕ್ತಾಲಯದ ತಿದ್ದು ಪಡಿ ಪತ್ರದ ಸಂಖ್ಯೆ ಗ್ರಾಅಪ 645 ಉಖಾಯೋ 2014 ದಿನಾಂಕ: 22-12-2014

3. ವಿಶೇಷ ಆಯುಕ್ತರು (ಅರಣ್ಯ) ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದ ಪತ್ರದ ಸಂಖ್ಯೆ ಗ್ರಾಅಪ 547 ಉಖಾಯೋ 2014 ದಿನಾಂಕ: 05-02-2015

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(3)ರಲ್ಲಿ ದಿನಾಂಕ: 28-01-2015ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಮಹಾತ್ಮ ಗಾಂದಿ ನರೇಗಾ ಯೋಜನೆಯ ಜಗ್ಗೂಡಿಸುವಿಕೆಯ ಪರಿಶೀಲನಾ ಸಭೆಯ ನಡವಳಿಯಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನರೇಗಾ ಯೋಜನೆಯ ಕಾಮಗಾರಿಗಳ ಚೆಕ್‌ಮೇಷರ್‌ಮೆಂಟ್ ಸಂಬಂಧ, ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಸಿವಿಲ್ ಕಾಮಗಾರಿಗಳ ಚೆಕ್‌ಮೇಷರ್‌ಮೆಂಟ್ ಹೊರಗುತ್ತಿಗೆಯ ಆಧಾರದ ಮೇಲೆ ಕಾರ್ಯನಿರ್ವಹಿಸುವ ತಾಂತ್ರಿಕ ಸಂಯೋಜಕರಿಗೆ ರೂ. 1.00 ಲಕ್ಷದವರೆಗೆ ಮಿತಿಗೊಳಿಸಿ, ಅದರ ಮೇಲ್ಪಟ್ಟು ಹಾಗೂ ರೂ. 3.00 ಲಕ್ಷದವರೆಗೆ ಎಲ್ಲಾ ಸಿವಿಲ್ ಕಾಮಗಾರಿಗಳ ಚೆಕ್‌ಮೇಷರ್‌ಮೆಂಟ್‌ಗಳನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಶಾಖಾಧಿಕಾರಿಗಳು ಮಾಡಲು ಹಾಗೂ ರೂ. 3.00 ಲಕ್ಷ ಮೇಲ್ಪಟ್ಟ ಸಿವಿಲ್ ಕಾಮಗಾರಿಗಳ ಚೆಕ್‌ಮೇಷರ್‌ಮೆಂಟ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಹಾಯ ಕಾರ್ಯಪಾಲಕ ಅಭಿಯಂತರರು ಮಾಡಲು ಪರಿಷ್ಕೃತ ಆದೇಶ ಹೊರಡಿಸುವಂತೆ ಸಭೆಯಲ್ಲಿ ತಿಳಿಸಿರುತ್ತಾರೆ. ಮೇಲಾಗಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಈಗ ಎರಡು ಇಲಾಖೆಗಳಾಗಿ ವಿಭಜನೆಯಾದ ನಂತರ (ಅಂದರೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಮತ್ತು ನೀರು ಸರಬರಾಜು ಇಲಾಖೆ) ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಕಾಮಗಾರಿಗಳ ಮೇಲ್ವಿಚಾರಣೆ ಮತ್ತು ಚೆಕ್‌ಮೇಷರ್‌ಮೆಂಟ್ ಇತ್ಯಾದಿ ಮಾಡುವ ಕೆಲಸಗಳು ಕಡಿಮೆಯಾಗಿರುವುದನ್ನು ಗಮನಿಸಲಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಅನುಷ್ಠಾನದಲ್ಲಿ ಕಾಮಗಾರಿಗಳ ಪ್ರಮಾಣವು ಹೆಚ್ಚಾಗುತ್ತಿರುವುದರಿಂದ, ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡಲು, ಸಮರ್ಪಕವಾಗಿ ಮೇಲ್ವಿಚಾರಣೆ

ಮತ್ತು ಚೆಕ್‌ಮೇಷರ್‌ಮೆಂಟ್ ಮಾಡಲು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಅಭಿಯಂತರರನ್ನು ಬಳಸಿಕೊಳ್ಳುವುದು ಅವಶ್ಯಕವಾಗಿದೆ.

ಈ ನಿಟ್ಟಿನಲ್ಲಿ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಮಹಾತ್ಮ ಗಾಂಧಿ ನರೇಗಾ ಯೋಜನೆಯಲ್ಲಿ ಒಳಗೊಂಡ ವಿವಿಧ ಇಲಾಖೆಗಳ ಕಾಮಗಾರಿಗಳ ಅಳತೆಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸುವ ಕೆಲಸ, ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಚೆಕ್‌ಮೇಷರ್‌ಮೆಂಟ್ ಮಾಡುವ ಕೆಲಸ ಹಾಗೂ ಕಾಮಗಾರಿಗಳ ಅಂತಿಮ ಬಿಲ್ಲುಗಳನ್ನು ಚುಕ್ತಗೊಳಿಸಲು ಸಲುವಾಗಿ ಕೌಂಟರ್ ಚೆಕ್‌ಮೇಷರ್‌ಮೆಂಟ್ ಮಾಡುವ ಕೆಲಸಗಳನ್ನು ವಿವಿಧ ಹಂತಗಳ ಪಂಚಾಯತ್‌ರಾಜ್ ಸಂಸ್ಥೆಗಳ ಅಧಿಕಾರಿಗಳಿಗೆ/ಸಿಬ್ಬಂದಿಗಳಿಗೆ ಮತ್ತು ಅನುಷ್ಠಾನ ಸಂಸ್ಥೆಗಳ ಅಧಿಕಾರಿಗಳಿಗೆ ವಹಿಸಬೇಕೆಂದು ಸರ್ಕಾರವು ತೀರ್ಮಾನಿಸಿದೆ. ಉಲ್ಲೇಖ(3)ರಲ್ಲಿ ತೆಗೆದುಕೊಂಡ ತೀರ್ಮಾನದ ಹಿನ್ನೆಲೆಯಲ್ಲಿ, ಇದರ ಸಂಬಂಧ ಈಗಾಗಲೇ ಉಲ್ಲೇಖ(1) ಮತ್ತು ಉಲ್ಲೇಖ(2)ರಲ್ಲಿ ಹೊರಡಿಸಲಾದ ಆದೇಶಗಳನ್ನು ಹಿಂಪಡೆದು ಪರಿಷ್ಕೃತ ಆದೇಶವನ್ನು ಈ ಮೂಲಕ ಹೊರಡಿಸಿದೆ. ಈ ಆದೇಶದೊಂದಿಗೆ ವಿವಿಧ ಹಂತಗಳ ಪಂಚಾಯತ್ ರಾಜ್ ಸಂಸ್ಥೆಗಳ ಮತ್ತು ಅನುಷ್ಠಾನ ಇಲಾಖೆಗಳ ಅಧಿಕಾರಿಗಳಿಗೆ ತಾಂತ್ರಿಕ ಮಂಜೂರಾತಿ, ಚೆಕ್‌ಮೇಷರ್‌ಮೆಂಟ್ ಮತ್ತು ಅಳತೆ ಪುಸ್ತಕದಲ್ಲಿ ಅಳತೆಗಳನ್ನು ದಾಖಲಿಸುವ ಅಧಿಕಾರಿಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಮುನೀಷ್ ಮೌದ್ಗಿಲ್
ಆಯುಕ್ತರು ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
10/3/15

ಗೆ

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು

<u>ಪ್ರತಿಯನ್ನು ಈ ಕೆಳಕಂಡ ಅಧಿಕಾರಿಗಳ ಮಾಹಿತಿಗಾಗಿ ಸಲ್ಲಿಸಿದೆ:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಅ & ಪಂ.ರಾಜ್ ಇವರ ಆಪ್ತ ಕಾರ್ಯದರ್ಶಿಗಳು.
4. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಅ & ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರಿಗೆ
5. ವಿಶೇಷ ಆಯುಕ್ತರು (ಅರಣ್ಯ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಅ & ಪಂ.ರಾಜ್ ಇಲಾಖೆ
6. ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಅ & ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರಿಗೆ
7. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು
8. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು
9. ಆಯುಕ್ತರು, ಪಶುಸಂಗೋಪನ ಇಲಾಖೆ, ವಿ.ವಿ.ಟವರ್, ಬೆಂಗಳೂರು
10. ರೇಷ್ಮೆ ಅಭಿವೃದ್ಧಿ ಆಯುಕ್ತರು, ರೇಷ್ಮೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
11. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಬೆಂಗಳೂರು/ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಸಾಮಾಜಿಕ ಅರಣ್ಯ), ಅರಣ್ಯ ಭವನ, ಬೆಂಗಳೂರು
12. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್ ರಸ್ತೆ, ಬೆಂಗಳೂರು
13. ನಿರ್ದೇಶಕರು, ಮೀನುಗಾರಿಕೆ ಇಲಾಖೆ, ವಿ.ವಿ.ಟವರ್, ಬೆಂಗಳೂರು

14. ಮುಖ್ಯ ಅಭಿಯಂತರರು (ಸಣ್ಣ ನೀರಾವರಿ) ದಕ್ಷಿಣ ವಲಯ ಜಲ ಸಂಪನ್ಮೂಲ ಇಲಾಖೆ ಆನಂದ್‌ರಾವ್ ವೃತ್ತ ಬೆಂಗಳೂರು/ಉತ್ತರ ವಲಯ ಬಿಜಾಪುರ
15. ಮುಖ್ಯ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರ್ ಇಲಾಖೆ, ಬೆಂಗಳೂರು
16. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಬೆಳಗಾಂ/ಗುಲ್ಬರ್ಗ/ಮೈಸೂರು.
17. ರಾಜ್ಯದ ಎಲ್ಲಾ ಒಂಬುಡ್ಸ್‌ಮನ್‌ಗಳಿಗೆ
18. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ
19. ನಿರ್ದೇಶಕರು, ಅಬ್ದುಲ್ ನಜೀರ್‌ಸಾಬ್, ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಲಲಿತಮಹಲ್ ರಸ್ತೆ, ಮೈಸೂರು-570011.
20. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರುಗಳು
21. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅ & ಪಂ.ರಾಜ್ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು
22. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಆಯುಕ್ತಾಲಯದ ಎಲ್ಲಾ ಅಧಿಕಾರಿಗಳಿಗೆ
23. ಶ್ರೀ. ಶ್ರೀನಿವಾಸ ಮಾರಂಗಪ್ಪನವರ್ ವಿಶೇಷಾಧಿಕಾರಿ ಗಣಕಕೋಶ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ಇಲಾಖಾ ವೆಬ್ ಸೈಟ್‌ನಲ್ಲಿ ಅಳವಡಿಸಲು ಕೋರಿದೆ.
24. ಶ್ರೀ. ವೈ. ಮಹಾಂಕಾಳಪ್ಪ ಸಂಪಾದಕರು ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿಗಳವರ ಮಾಹಿತಿಗಾಗಿ ಹಾಗೂ ಇದನ್ನು ಕರ್ನಾಟಕ ವಿಕಾಸದಲ್ಲಿ ಪ್ರಕಟಿಸಲು ಕೋರಿದೆ.
25. M/s Effia Technologies, ಅವರಿಗೆ www.end2endsolutions.comನಲ್ಲಿ ಪ್ರಕಟಿಸಲು/ಅಳವಡಿಸಲು ಕೋರಿದೆ.
26. ಹೆಚ್ಚಿನ ಪ್ರತಿಗಳು/ಮಹಾ ಕಡತಕ್ಕೆ .

## ಅನುಬಂಧ

### ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳಿಗೆ ವಿವಿಧ ಹಂತಗಳ ಅಧಿಕಾರಿಗಳಿಗೆ ತಾಂತ್ರಿಕ ಅನುಮೋದನೆ ನೀಡುವ ಅಧಿಕಾರ, ಕಾಮಗಾರಿಗಳ ಅಳತೆಗಳನ್ನು ಅಳತೆ ಪುಸ್ತಕದಲ್ಲಿ ದಾಖಲು ಮಾಡುವ ಅಧಿಕಾರ, ಚೆಕ್ ಮೆಷರ್‌ಮೆಂಟ್ ಮಾಡುವ ಅಧಿಕಾರ ಮತ್ತು ಕೌಂಟರ್ ಚೆಕ್ ಮೆಷರ್‌ಮೆಂಟ್ ಮಾಡುವ ಅಧಿಕಾರದ ವಿವರಗಳ ತಃಖ್ತೆ

ಸಂ: ಗ್ರಾಅಪ 74 ಉಖಾಯೋ 2014 ದಿನಾಂಕ:07-03-2015

ಪ್ರಮುಖ ಸೂಚನೆ: ಈ ಕೆಳಗಿನ ಕೋಷ್ಟಕವನ್ನು ಇಲಾಖೆಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನ ಇಲಾಖೆಗಳೆಂದು ಗುರುತಿಸಿದ್ದಲ್ಲಿ ಅದರಲ್ಲಿನ ನಿಂಬಧನೆಗೆ ಒಳ ಪಟ್ಟಿರುತ್ತದೆ. ಅನುಷ್ಠಾನ ಇಲಾಖೆಯು ಈ ಯೋಜನೆಯ ಕಾಮಗಾರಿಗಳನ್ನು ಅನುಷ್ಠಾನಿಸಿ (Execution) ಮಾಡಿ ತಮ್ಮ DSCಗಳ ಮೂಲಕ ಅನುಷ್ಠಾನ ಇಲಾಖೆಯ e-FMS ಲಾಗಿನ್ ಮೂಲಕ ಹಣ ಸಂದಾಯ ಮಾಡುತ್ತಿದ್ದಲ್ಲಿ, ಅಂತಹ ಸಂದರ್ಭಗಳಲ್ಲಿ 1. ಅಳತೆಗಳನ್ನು ಮತ್ತು 2. ಚೆಕ್‌ಮೆಷರ್‌ಮೆಂಟ್‌ಗಳನ್ನು ತಮ್ಮ ಇಲಾಖೆಯ ನಿಗಿಧಿಪಡಿಸಿದ ಪ್ರಾಧಿಕಾರಿಗಳಿಂದ ಮಾಡಿಸಬಹುದು. (The following table should be read with general condition that in case a department or agency is declared as "Implementing Agency" for MGNREGA by order by MGNREGS, Rural Development and Panchayat Raj Department, executes MGNREGS work and is paying under their signature & line department e-FMS login, then they can get (i) Measurement and (ii) Check Measurement from authorities as prescribed for their own departmental works.)

| ಕ್ರ ಸಂ | ಇಲಾಖೆಗಳ ಹೆಸರು | ತಾಂತ್ರಿಕ ಅನುಮೋದನೆಯನ್ನು ನೀಡುವ ವಿವಿಧ ಹಂತಗಳ ಪದನಾಮದ ಹೆಸರು | ಕಾಮಗಾರಿಗಳ ಅಂದಾಜುಗಳಿಗೆ ಅನುಮೋದನೆ ನೀಡುವ ಮೊತ್ತದ ಮಿತಿ ರೂ. ಲಕ್ಷಗಳಲ್ಲಿ | ಅಳತೆ ಪುಸ್ತಕದಲ್ಲಿ ಅಳತೆ ದಾಖಲಾತಿ ರೂ. ಲಕ್ಷಗಳಲ್ಲಿ | ಪ್ರಗತಿಯಲ್ಲಿರುವ ಕಾಮಗಾರಿಗಳ ಚೆಕ್ ಮೆಷರ್‌ಮೆಂಟ್ ಮಾಡುವರು ರೂ. ಲಕ್ಷಗಳಲ್ಲಿ | ಮುಕ್ತಾಯವಾದ ಕಾಮಗಾರಿಗಳ ಬಿಲ್ಲುಗಳನ್ನು ಅಂತಿಮವಾಗಿ ಚುಕ್ತಾ ಮಾಡಲು ಕೌಂಟರ್ ಚೆಕ್ ಮೆಷರ್‌ಮೆಂಟ್ ಮಾಡುವವರು ರೂ. ಲಕ್ಷಗಳಲ್ಲಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಅರಣ್ಯ | ಅ) ವಲಯ ಅರಣ್ಯ ಸಂರಕ್ಷಣಾಧಿಕಾರಿ (RFO) | 3.00 ಲಕ್ಷಗಳ ವರೆಗೆ | ಅ) ರೂ. 1.00 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಅರಣ್ಯ ರಕ್ಷಕ/ಉಪವಲಯ ಅರಣ್ಯಾಧಿಕಾರಿ/ಹೊರಗುತ್ತಿಗೆ ಆಧಾರದ ಮೇಲಿನ ಕೃಷಿ/ತೋಟಗಾರಿಕೆ/ ಪದವೀದರರು | ಅ) ರೂ. 1.00 ಲಕ್ಷಗಳ ವರೆಗಿನ. ಕಾಮಗಾರಿಗಳಿಗೆ ಇಲಾಖೆಯ ವಲಯ ಅರಣ್ಯ ಅಧಿಕಾರಿ (Range Forest Officer)<br><br>ಆ) ರೂ. 1.00 ಲಕ್ಷಗಳ ಮೇಲ್ಪಟ್ಟ ಕಾಮಗಾರಿಗಳಿಗೆ ಇಲಾಖೆಯ ಸಹಾಯಕ | |
| | | ಆ) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ACF) | 3.00 ಲಕ್ಷ ಮೇಲ್ಪಟ್ಟು ಹಾಗೂ 10.00 ಲಕ್ಷಗಳ ವರೆಗೆ | | | |
| | | ಇ) ಉಪ ಅರಣ್ಯ ಸಂರಕ್ಷಣಾಧಿಕಾರಿ (DCF) | 10.00 ಲಕ್ಷಕ್ಕೂ ಮೇಲ್ಪಟ್ಟು | | | |

| | | | | | | |
|---|---|---|---|---|---|---|
| | | | | ಆ) ರೂ. 1.00 ಲಕ್ಷಗಳ ಮೇಲ್ಪಟ್ಟ ಕಾಮಗಾರಿಗಳಿಗೆ ಅರಣ್ಯ ರಕ್ಷಕ/ಉಪವಲಯ ಅರಣ್ಯಾಧಿಕಾರಿ/ವಲಯ ಅರಣ್ಯ ಅಧಿಕಾರಿ | ಅರಣ್ಯ ಸಂರಕ್ಷಣಾಧಿಕಾರಿಗಳು | ಕಾಮಗಾರಿಗಳಿಗೆ ತಾಂತ್ರಿಕ ಅನುಮೋದನೆಯನ್ನು ನೀಡಿರುವ ಸಕ್ಷಮಾಧಿಕಾರಿ ಯವರು ಬಿಲ್ಲುಗಳನ್ನು ಅಂತಿಮಗೊಳಿಸಿ ಕೌಂಟರ್ ಚೆಕ್ ಮೆಷರ್‌ಮೆಂಟ್ ಮಾಡಲು ಕ್ರಮವಹಿಸುತ್ತಾರೆ. |
| 2 | ತೋಟಗಾರಿಕೆ | ಅ) ಸಹಾಯಕ ತೋಟಗಾರಿಕೆ ಅಧಿಕಾರಿ | 3.00 ಲಕ್ಷಗಳ ವರೆಗೆ | ಸಹಾಯಕ ತೋಟಗಾರಿಕೆ ಅಧಿಕಾರಿ/ತಾಂತ್ರಿಕ ಸಹಾಯಕರು | ಇಲಾಖೆಯ ತಾಲ್ಲೂಕಿನ ಹಿರಿಯ ಸಹಾಯಕ ನಿರ್ದೇಶಕರು/ ಸಹಾಯಕ ನಿರ್ದೇಶಕರು | |
| | | ಆ) ಹಿರಿಯ ಸಹಾಯಕ ನಿರ್ದೇಶಕರು/ ಸಹಾಯಕ ನಿರ್ದೇಶಕರು | 3.00 ರಿಂದ 10.00 ಲಕ್ಷಗಳ ವರೆಗೆ | | | |
| | | ಇ) ಉಪ ನಿರ್ದೇಶಕರು | 10 ಲಕ್ಷಕ್ಕೂ ಮೇಲ್ಪಟ್ಟು | | | |
| 3 | ರೇಷ್ಮೆ | ಅ) ರೇಷ್ಮೆ ವಿಸ್ತೀರ್ಣ ಅಧಿಕಾರಿ | 3.00 ಲಕ್ಷಗಳ ವರೆಗೆ | ರೇಷ್ಮೆ ವಿಸ್ತೀರ್ಣ ಅಧಿಕಾರಿ/ ತಾಂತ್ರಿಕ ಸಹಾಯಕರು | ಇಲಾಖೆಯ ತಾಲ್ಲೂಕಿನ ಸಹಾಯಕ ನಿರ್ದೇಶಕರು | |
| | | ಆ) ರೇಷ್ಮೆ ಸಹಾಯಕ ನಿರ್ದೇಶಕರು | 3.00 ಲಕ್ಷ ಮೇಲ್ಪಟ್ಟು ಹಾಗೂ 10.00 ಲಕ್ಷಗಳ ವರೆಗೆ | | | |
| | | ಇ) ರೇಷ್ಮೆ ಉಪ ನಿರ್ದೇಶಕರು | 10 ಲಕ್ಷಕ್ಕೂ ಮೇಲ್ಪಟ್ಟು | | | |
| 4 | ಕೃಷಿ | ಅ) ಕೃಷಿ ಅಧಿಕಾರಿ | 3.00 ಲಕ್ಷಗಳ ವರೆಗೆ | ತಾಂತ್ರಿಕ ಸಹಾಯಕರು/ ಸಹಾಯಕ ಕೃಷಿ ಅಧಿಕಾರಿ | ಇಲಾಖೆಯ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರು | |
| | | ಆ) ಸಹಾಯಕ ಕೃಷಿ ನಿರ್ದೇಶಕರು, | 3.00 ಲಕ್ಷ ಮೇಲ್ಪಟ್ಟು ಹಾಗೂ 10.00 ಲಕ್ಷಗಳ ವರೆಗೆ | | | |
| | | ಇ) ಉಪ ಕೃಷಿ ನಿರ್ದೇಶಕರು | 10.00 ಲಕ್ಷಕ್ಕೂ ಮೇಲ್ಪಟ್ಟು | | | |
| 5 | ಮೀನುಗಾರಿಕೆ | ಅ) ಸಹಾಯಕ ಮೀನುಗಾರಿಕೆ ಅಧಿಕಾರಿ | 3.00 ಲಕ್ಷಗಳ ವರೆಗೆ | ಸಹಾಯಕ ಮೀನುಗಾರಿಕೆ ಅಧಿಕಾರಿ/ತಾಂತ್ರಿಕ ಸಹಾಯಕರು | ಇಲಾಖೆಯ ತಾಲ್ಲೂಕಿನ ಸಹಾಯಕ ನಿರ್ದೇಶಕರು | |
| | | ಆ) ಹಿರಿಯ ಸಹಾಯಕ ನಿರ್ದೇಶಕರು/ಸಹಾಯಕ ನಿರ್ದೇಶಕರು | 3.00 ರಿಂದ 10.00 ಲಕ್ಷಗಳ ವರೆಗೆ | | | |
| | | ಇ) ಉಪ ನಿರ್ದೇಶಕರು | 10 ಲಕ್ಷಕ್ಕೂ ಮೇಲ್ಪಟ್ಟು | | | |
| 6 | ಪಶು ಸಂಗೋಪನೆ | ಅ) ಹಿರಿಯ ಸಹಾಯಕ ನಿರ್ದೇಶಕರು/ಸಹಾಯಕ ನಿರ್ದೇಶಕರು | 10 ಲಕ್ಷಗಳ ವರೆಗೆ | ತಾಲ್ಲೂಕು ಮಟ್ಟದ ಅಥವಾ ಗ್ರಾ.ಪಂ ಮಟ್ಟದ ಪಶುಸಂಗೋಪನಾ ಇಲಾಖೆಯ ಅಧಿಕಾರಿಗಳು/ ತಾಂತ್ರಿಕ ಸಹಾಯಕರು | ಇಲಾಖೆಯ ತಾಲ್ಲೂಕಿನ ಸಹಾಯಕ ನಿರ್ದೇಶಕರು | |
| | | ಆ) ಉಪ ನಿರ್ದೇಶಕರು | 10 ಲಕ್ಷಕ್ಕೂ ಮೇಲ್ಪಟ್ಟು | | | |

| | | | | | | |
|---|---|---|---|---|---|---|
| 7 | ಪಂಚಾಯತ್ ರಾಜ್ ಇಂಜಿನಿಯರಿಂಗ್ | ಅ)ಸಹಾಯಕ ಅಭಿಯಂತರರು/ಕಿರಿಯ ಅಭಿಯಂತರರು | 3.00 ಲಕ್ಷಗಳ ವರೆಗೆ | ಸಹಾಯಕ ಅಭಿಯಂತರರು/ ಕಿರಿಯ ಅಭಿಯಂತರರು/ ತಾಂತ್ರಿಕ ಸಹಾಯಕರು | ಕಾಮಗಾರಿಗಳಗೆ ಚೆಕ್‌ಮೇಷರ್‌ಮೆಂಟನ್ನು ಈ ಕೆಳಕಂಡ ಅಧಿಕಾರಿಗಳಂದ/ಸಿಬ್ಬಂದಿಗಳಂದ ಕಾಮಗಾರಿಗಳ ಅಂದಾಜು ಪಟ್ಟಿಯ ಮೊತ್ತಗಳಗೆ ಅನುಗುಣವಾಗಿ ಮಾಡಲು ಕ್ರಮವಹಿಸುವುದು.<br>1. ರೂ. 1.00 ಲಕ್ಷದವರೆಗಿನ ಸಿವಿಲ್ ಕಾಮಗಾರಿಗಳನ್ನು ತಾಲ್ಲೂಕು ಪಂಚಾಯಿತಿಯ ಸಹಾಯಕ ನಿರ್ದೇಶಕರು ಮತ್ತು ತಾಂತ್ರಿಕ ಸಂಯೋಜಕರು<br>2. ರೂ. 1.00 ಲಕ್ಷ ಮೇಲ್ಪಟ್ಟು ಮತ್ತು ರೂ. 3.00 ಲಕ್ಷದವರೆಗೆ ಇರುವ ಸಿವಿಲ್ ಕಾಮಗಾರಿಗಳಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಶಾಖಾಧಿಕಾರಿಗಳು & ತಾಲ್ಲೂಕು ಪಂಚಾಯಿತಿಯ ಸಹಾಯಕ ನಿರ್ದೇಶಕರು<br>3. ರೂ. 3.00 ಲಕ್ಷಗಳಗೆ ಮೇಲ್ಪಟ್ಟ ಸಿವಿಲ್ ಕಾಮಗಾರಿಗಳಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು. | ಕಾಮಗಾರಿಗಳಗೆ ತಾಂತ್ರಿಕ ಅನುಮೋದನೆಯನ್ನು ನೀಡಿರುವ ಸಕ್ಷಮಾಧಿಕಾರಿಯವರು ಬಿಲ್ಲುಗಳನ್ನು ಅಂತಿಮಗೊಳಸಿ ಕೌಂಟರ್ ಚೆಕ್ ಮೆಷರ್‌ಮೆಂಟ್ ಮಾಡಲು ಕ್ರಮವಹಿಸುತ್ತಾರೆ. |
| | | ಆ) ಸಹಾಯಕ ಕಾರ್ಯಪಾಲಕ ಅಭಿಯಂತರರು | 3.00 ರಿಂದ 10.00 ಲಕ್ಷಗಳ ವರೆಗೆ | | | |
| | | ಇ) ಕಾರ್ಯಪಾಲಕ ಅಭಿಯಂತರರು | 10 ಲಕ್ಷಕ್ಕೂ ಮೇಲ್ಪಟ್ಟು | | | |
| 8 | ಜಲ ಸಂಪನ್ಮೂಲ (ಸಣ್ಣ ನೀರಾವರಿ) | ಅ)ಸಹಾಯಕ ಅಭಿಯಂತರರು/ಕಿರಿಯ ಅಭಿಯಂತರರು | 3.00 ಲಕ್ಷಗಳ ವರೆಗೆ | ಸಹಾಯಕ ಅಭಿಯಂತರರು/ ಕಿರಿಯ ಅಭಿಯಂತರರು | ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು | |
| | | ಆ) ಸಹಾಯಕ ಕಾರ್ಯಪಾಲಕ ಅಭಿಯಂತರರು | 3.00 ರಿಂದ 10.00 ಲಕ್ಷಗಳ ವರೆಗೆ | | | |
| | | ಇ) ಕಾರ್ಯಪಾಲಕ ಅಭಿಯಂತರರು | 10 ಲಕ್ಷಕ್ಕೂ ಮೇಲ್ಪಟ್ಟು | | | |

**ಟಿಪ್ಪಣಿ:** ಜಲಾನಯನ ಅಭಿವೃದ್ಧಿ ಇಲಾಖೆಯು ಕೃಷಿ ಇಲಾಖೆಯೊಂದಿಗೆ ಸರ್ಕಾರದ ಆದೇಶ ಸಂ:ಕೃಇ/166/ಕೃಪಸೇ/2011 ಬೆಂಗಳೂರು ದಿ:08-07-2014 ರಲ್ಲಿ ವಿಲೀನವಾಗಿರುತ್ತದೆ. ಆದ್ದರಿಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಗಳ ಕಾಮಗಾರಿಗಳನ್ನು ಅನುಷ್ಠಾನಗೊಳಸುವ ಸಂಬಂಧ ಕಾಮಗಾರಿಗಳ ಅಂದಾಜುಗಳಗೆ ಮಂಜೂರಾತಿ ನೀಡುವುದು, ಅಳತೆ ಪುಸ್ತಕದಲ್ಲಿ ಅಳತೆಗಳನ್ನು ದಾಖಲಿಸುವುದು, ಪ್ರಗತಿಯಲ್ಲಿರುವ ಕಾಮಗಾರಿಗಳ ಚೆಕ್ ಮೆಷರ್‌ಮೆಂಟ್ ಮಾಡುವುದು ಮತ್ತು ಮುಕ್ತಾಯವಾದ ಕಾಮಗಾರಿಗಳ ಬಿಲ್ಲುಗಳನ್ನು ಅಂತಿಮಗೊಳಸಲು ಕೌಂಟರ್ ಚೆಕ್ ಮೆಷರ್ ಮೆಂಟ್ ಮಾಡುವುದು ಇವುಗಳ ಬಗ್ಗೆ ವಿಲೀನದ ಆದೇಶದ ಪ್ರಕಾರ ಕೃಷಿ ಇಲಾಖೆಯ ಅಧಿಕಾರಿಗಳನ್ನು ಗುರುತಿಸಿ ಸೇರಿಸಲಾಗಿದೆ.

ಆಯುಕ್ತರು
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.